ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.

	ತಾಲ್ಲೂಕು	ವಕ್ಫ್ ಸಂಸ್ಥೆಗಳ ಸಂಖ್ಯೆ	ಮೊತ್ತ ರೂ.
1.	ಮದ್ದೂರು	05	2,10,000-00
2.	ಪಾಂಡವಪುರ	01	25,000-00
3.	ಕೆ.ಆರ್. ಪೇಟೆ	06	1,50,000-00
4.	ಮಳವಳ್ಳಿ	02	40,000-00
5.	ಶ್ರೀರಂಗಪಟ್ಟಣ	04	90,000-00
6.	ಮಂಡ್ಯ	14	5,30,000-00

ಬೆಂಗಳೂರು-ಮೈಸೂರು ಮಧ್ಯೆ ಕಾರಿಡಾರ್ ರಸ್ತೆ ನಿರ್ಮಾಣಕ್ಕೆ ಜಮೀನು ಸ್ವಾಧೀನ.

2193(2792) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು- ಮೈಸೂರು ಮಧ್ಯೆ ಪ್ರಸ್ತಾವಿತ ಕಾರಿಡಾರ್ ರಸ್ತೆ ನಿರ್ಮಿಸಲು ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಜಮೀನಿನ ವಿಸ್ತೀರ್ಣ ಎಷ್ಟು?

ಆ) ಭೂಸ್ವಾಧೀನ ಪ್ರಕ್ರಿಯೆ ಸಂಪೂರ್ಣಗೊಂಡಿದೆಯೆ?

ಇ) ಜಮೀನು ಕಳೆದುಕೊಳ್ಳುತ್ತಿರುವ ಕೃಷಿಕರಿಗೆ ಪುನರ್ವಸತಿ ಹಾಗೂ ಉದ್ಯೋಗದ ಭರವಸೆಯನ್ನೇನಾದರೂ ನೀಡಲಾಗಿದೆಯೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

ಅ) ಬೆಂಗಳೂರು-ಮೈಸೂರು ಮಧ್ಯೆ ಪ್ರಸ್ತಾವಿತ ಕಾರಿಡಾರ್ ರಸ್ತೆ ನಿರ್ಮಿಸಲು 20,193 ಎಕರೆ ಜಮೀನನ್ನು ಕೆ.ಐ.ಎ.ಡಿ ಕಾಯ್ದೆ ಅಡಿಯಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ. ಇದರಲ್ಲಿ ವೇಗದ ಹೆದ್ದಾರಿ ಮತ್ತು ಅದಕ್ಕೆ ತಕ್ಷಂಬಂಧಿಸಿದ ರಸ್ತೆಗಳ ನಿರ್ಮಾಣಕ್ಕೆ ಒಟ್ಟಾರೆ 6,999 ಎಕರೆ ಜಮೀನು ಬೇಕಾಗುವುದು.

ಆ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಕೆ.ಐ.ಎ.ಡಿ ಕಾಯ್ದೆ ಅನ್ವಯ ಭೂಸ್ವಾಧೀನ ಕೈಗೊಳ್ಳಲು ಪ್ರಾಥಮಿಕ ಅಧಿಸೂಚನೆ ಮಾತ್ರ ಹೊರಡಿಸಲಾಗಿದೆ.

ಇ) ಕರ್ನಾಟಕ ಸರ್ಕಾರವು ಜಮೀನು ಹಾಗೂ ಮನೆ ಕಳೆದುಕೊಳ್ಳುತ್ತಿರುವ ಕೃಷಿಕರಿಗೆ ಪುನರ್ವಸತಿ ಹಾಗೂ ಪುನರ್‌ನಿರ್ಮಾಣದ ಪ್ರಸ್ತಾವನೆಯನ್ನು ರೂ. 19.12 ಕೋಟಿಗಳಲ್ಲಿ ಅನುಷ್ಠಾನಗೊಳಿಸಲು ಒಪ್ಪಿಗೆ ನೀಡಿದೆ. ಈ ಮೊತ್ತವನ್ನು ಕಂಪನಿಯು (ನೈಸೆಲ್) ತನ್ನ ಸ್ವಂತ ಬಂಡವಾಳದಲ್ಲಿ ಜಮೀನು ಹಾಗೂ ಮನೆ ಕಳೆದುಕೊಳ್ಳುತ್ತಿರುವ ಕುಟುಂಬ ಅಥವಾ ಸದಸ್ಯರಿಗೆ ಪುನರ್‌ವಸತಿ ಹಾಗೂ ಪುನರ್‌ನಿರ್ಮಾಣ ಕಲ್ಪಿಸಿಕೊಡುವುದು.

ಮಂಡ್ಯ ಜಿಲ್ಲೆಯಲ್ಲಿನ ಪ್ರವಾಸಿ ಕೇಂದ್ರ ಹಾಗೂ ಪ್ರೇಕ್ಷಣೆಯ ಸ್ಥಳಗಳನ್ನು ಅಭಿವೃದ್ಧಿ ಗೊಳಿಸುವುದು.

2194(2793) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಡ್ಯ ಜಿಲ್ಲೆಯಲ್ಲಿ ಗುರುತಿಸಲಾದ ಪ್ರವಾಸಿ ಕೇಂದ್ರ ಹಾಗೂ ಪ್ರೇಕ್ಷಣೀಯ ಸ್ಥಳಗಳು ಯಾವುವು?

ಆ) ಇವುಗಳ ಅಭಿವೃದ್ಧಿಗೆ ಸರ್ಕಾರವು ಈವರೆವಿಗೆ ಯಾವ ಕ್ರಮಗಳನ್ನು ಕೈಗೊಂಡಿದೆ?

ಇ) ಯಾವುದೇ ಸೌಲಭ್ಯವಿಲ್ಲದ ಪ್ರವಾಸಿ ಕೇಂದ್ರಗಳು ಯಾವುವು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು) :—

ಅ) ಶ್ರೀರಂಗಪಟ್ಟಣ, ಮೇಲುಕೋಟಿ, ಶಿವನಸಮುದ್ರ, ಕೊಕ್ಕರೆ ಬೆಳ್ಳೂರು, ಹೊಸಹೊಳಲು, ಬಸರಾಳು, ಹೊಸಬೂದನೂರು, ಕಿಕ್ಕೇರಿ, ಗಾಣದಾಳ.

Srirangapattana, Melkote, Shivana Samudra, Kokkarebellur, Hosaholalu, Basaralu, Hosabudanur, Kikkeri, Ganadalu.

ಅ) ನಿರ್ಮಿಸಲಾದ ಸೌಲಭ್ಯಗಳು	ನಿರ್ಮಿಸಲು ಉದ್ದೇಶಿಸಿರುವ ಸೌಲಭ್ಯಗಳು
1. ಶ್ರೀರಂಗಪಟ್ಟಣ	
1. ಉಪಹಾರಗೃಹ ಮತ್ತು ಶೌಚಾಲಯ (ಶ್ರೀರಂಗನಾಥಸ್ವಾಮಿ ದೇವಸ್ಥಾನದ ಬಳಿ	1) ಸಮ್ಮರ್ ಪ್ಯಾಲೇಸ್ ಮತ್ತು ಗುಂಬಜ್‌ಗಳಿಗೆ ಹೊಸಲು ಬೆಳಕು
2. ಬಸ್ ನಿಲ್ದಾಣದ ಬಳಿ ಶೌಚಾಲಯ	2) ಯಾತ್ರಿ ನಿವಾಸ ನಿರ್ಮಾಣ
3. ಕಾವೇರಿ ನದಿ ತೀರದ ಕುಟೀರಗಳು	3) ದೇವಾಲಯದ ಬಳಿ ಸುಲಭ ಶೌಚಾಲಯ
4. ಗುಂಬಜ್ ಬಳಿ ಶೌಚಾಲಯ	